## ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು

**ಸಿ.ಸಿ.ಸಂಖ್ಯೆ: 1671/2018**

ಪಿರ್ಯಾದಿ : ಸರ್ಕಾರದ ಪರ: ಹುಲ್ಲಹಳ್ಳಿ ಪೊಲೀಸರು

ವಿರುದ್ಧ

ಆರೋಪಿತರು : 1. ಬಸವರಾಜು ಬಿನ್ ಲೇ.ಚಿಕ್ಕಮಲ್ಲಯ್ಯ, 36 ವರ್ಷ ,
2. ಶಶಿಕಲಾ ಕೋಂ ಬಸವರಾಜು, 29 ವರ್ಷ
ಇಬ್ಬರು ಹೋಸವೀಡು ಹುಂಡಿ ಗ್ರಾಮ, ಮೈಸೂರು ಜಿಲ್ಲೆ .

**ದೋಷಾರೋಪಣೆ**

ಶ್ರೀನಾಥ್.ಎ, ಸಿ/ಸಿ ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಧೀಶನಾದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ:-

ದಿನಾಂಕ: 14.11.2017 ರಂದು ರಾತ್ರಿ 09.00 ಗಂಟೆ ಸಮಯದಲ್ಲಿ ಹುಲ್ಲಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಹೊಸವೀಡು ಹುಂಡಿ ಗ್ರಾಮದ ಪರಿಶಿಷ್ಟ ಜನಾಂಗದ ಬೀದಿಯಲ್ಲಿ ವಾಸವಾಗಿರುವ ಚಾಸಾ-08 ರವರ ಮನೆಯ ಮುಂಭಾಗದ ರಸ್ತೆಯಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶಹೊಂದಿ ಚಾಸಾ-01 ರವರಿಗೆ ನಮ್ಮ ಕೆಲಸಕ್ಕೆ ಬರುವ ಆಳುಗಳನ್ನು ನೀನು ಕೆಲಸಕ್ಕೆ ಕರೆಯುತ್ತಿದ್ದೀಯಾ ಎಂದು 1 ನೇ ಆರೋಪಿಯಾದ ನೀವು ಚಾಸಾ-01 ರವರಿಗೆ ಏನೋ ಬೋಳಿ ಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಅವಮಾನಮಾಡಿ ಶಾಂತಿಯನ್ನು ಭಂಗಮಾಡಿದ ಕಾರಣ ಭಾರತ ದಂಡ ಸಂಹಿತೆ ಕಲಂ 504 ಸಹವಾಚಕ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಎರಡನೇಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶಹೊಂದಿ ಚಾಸಾ-01 ರವರನ್ನು ಹಿಡಿದು ಅಕ್ರಮ ತಡೆಯನ್ನುಂಟುಮಾಡಿದ ಕಾರಣ ಭಾರತ ದಂಡ ಸಂಹಿತೆ ಕಲಂ 341 ಸಹವಾಚಕ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಮೂರನೇಯದಾಗಿ , ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶಹೊಂದಿ 1 ನೇ ಅರೋಪಿಯಾದ ನೀವು ಚಾಸಾ-01 ರವರಿಗೆ ಹಿಡಿದು ಕೆಳಕ್ಕೆ ಕೆಡವಿ ಸ್ಥಳದಲ್ಲೆ ಬಿದ್ದಿದ್ದ ಮರದ ರಿಪೀಸ್ ಪಟ್ಟಿಯನ್ನು ಎತ್ತಿಕೊಂಡು ಚಾಸಾ-02 ರವರ ತಲೆಯ ಬಲಭಾಗಕ್ಕೆ ಹೊಡೆದು ಸ್ವಯಂ ಪ್ರೇರಿತವಾಗಿ ಸಾಮಾನ್ಯ ಸ್ವರೂಪದ

ಗಾಯಗಳನ್ನುಂಟುಮಾಡಿದ ಕಾರಣ ಭಾರತ ದಂಡ ಸಂಹಿತೆ ಕಲಂ 324 ಸಹವಾಚಕ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಕೊನೆಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶಹೊಂದಿ ಗಲಾಟೆ ಬಿಡಿಸಲು ಬಂದ ಚಾಸಾ-02 ರವರನ್ನು 2 ನೇ ಆರೋಪಿಯಾದ ನೀವು ಹಿಡಿದು ಕೆಳಕ್ಕೆ ಕೆಡವಿ ತಲೆಯ ಎಡಭಾಗಕ್ಕೆ ಮತ್ತು ಕಾಲಿನಿಂದ ಎಡಭಾಗದ ಎದೆಗೆ ತುಳಿದು ಸ್ವಯಂ ಪ್ರೇರಿತವಾಗಿ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟುಮಾಡಿದ ಕಾರಣ ಭಾರತ ದಂಡ ಸಂಹಿತೆ ಕಲಂ 323 ಸಹವಾಚಕ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

**ಮೇಲ್ಕಂಡ ಆಪಾದನೆಗೆ ಆರೋಪಿಗಳಾದ ನಿಮ್ಮನ್ನು ನ್ಯಾಯಾಲಯದ ಅಧಿವಿಚಾರಣೆಯನ್ನು ಎದುರಿಸಬೇಕೆಂದು ಆದೇಶಿಸುತ್ತೇನೆ.**

16.1.20

**ದಿನಾಂಕಃ 16.01.2020** ಸಿ/ಸಿ ಪ್ರಧಾನ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ನಂಜನಗೂಡು